# MAYA CARE FOUNDATION

Maya CARE Foundation
The next best thing to family

## ವರದಿ ಪತ್ರಿಕೆ

Year: 1st Issue: 3rd
2025

ಉಚಿತ ಮತ್ತು ಖಾಸಗಿ ಪ್ರಸರಣಕ್ಕೆ ಮಾತ್ರ

## ಸಂಪಾದಕೀಯ

ಭಾರತದಲ್ಲಿ ಹಿರಿಯ ನಾಗರಿಕರ ಸಂಖ್ಯೆ ಹಾಗು ವಿಕಲ ಚೇತನರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. 2021ರ ಅಂದಾಜುಗಳ ಪ್ರಕಾರ, ದೇಶದಲ್ಲಿ ಸುಮಾರು 13.8 ಕೋಟಿ ಹಿರಿಯರು (60 ವರ್ಷ ಮೇಲ್ಪಟ್ಟವರು) ವಾಸಿಸುತ್ತಿದ್ದಾರೆ. ಈ ಸಂಖ್ಯೆಯು 2050ರ ವೇಳೆಗೆ 30 ಕೋಟಿಗೂ ಅಧಿಕವಾಗಬಹುದು. ಈ ಬೆಳವಣಿಗೆಯು ಆರೋಗ್ಯ, ಆರ್ಥಿಕ ಭದ್ರತೆ ಮತ್ತು ಸಾಮಾಜಿಕ ಸಹಕಾರದ ಕ್ಷೇತ್ರಗಳಲ್ಲಿ ಹಲವಾರು ಸವಾಲುಗಳನ್ನು ಒಡ್ಡುತ್ತದೆ. ಇದನ್ನು ಪರಿಗಣಿಸಿ, ಕೇಂದ್ರಾಡಳಿತವು ಆರ್ಥಿಕ ವ್ಯವಸ್ಥೆಯಲ್ಲಿ ಸೂಕ್ಷ್ಮ ಬದಲಾವಣೆಗಳನ್ನು ತಂದಿದೆ. ಫೆಬ್ರವರಿ 1 ರಂದು ನಡೆದ ಕೇದ್ರ ಬಜೆಟ್ ಲ್ಲಿ, ಹಿರಿಯ ನಾಗರಿಕರಿಗಾಗಿ ಅಟಲ್ ವಯೋ ಅಭ್ಯುದಯ್ ಯೋಜನೆಗೆ ₹289.69 ಕೋಟಿ ಹಣ ಮೀಸಲಾಗಿ ಇಟ್ಟಿದೆ. ಹಿರಿಯರಿಗೆ ಬಡ್ಡಿ ಆದಾಯದ ಮೇಲಿನ ತೆರಿಗೆ ಮಿತಿಯನ್ನು ₹1 ಲಕ್ಷಕ್ಕೆ ದ್ವಿಗುಣಗೊಳಿಸಲಾಗಿದೆ. ಬಾಡಿಗೆಯ ಮೇಲಿನ ಟಿಡಿಎಸ್ ಮಿತಿಯನ್ನು ₹2.4 ಲಕ್ಷದಿಂದ ₹6 ಲಕ್ಷಕ್ಕೆ ಹೆಚ್ಚಿಸಲಾಗಿದೆ. ಎಡಿಐಪಿ ಯೋಜನೆಗೆ ₹316.7 ಕೋಟಿ, ದೀನ್ ದಯಾಳ್ ಯೋಜನೆಗೆ ₹165 ಕೋಟಿ, ಅಂಗವಿಕಲ ವಿದ್ಯಾರ್ಥಿವೇತನಕ್ಕೆ ₹145 ಕೋಟಿ ಮತ್ತು ಪುನರ್ವಸತಿ ಸಂಸ್ಥೆಗಳಿಗೆ ₹430.19 ಕೋಟಿ ರೂ. ಅನುದಾನ ನೀಡಲಾಗಿದೆ. ಸರ್ಕಾರದ ಇಂತಹ ಬದಲಾವಣೆಗಳ ಜೊತೆಗೆ ಸರ್ಕಾರೇತರ ಸಂಸ್ಥೆಗಳು ಹಿರಿಯ ಹಾಗು ವಿಕಲ ಚೇತನರಿಗಾಗಿ ಸತತ ಕಾರ್ಯ ಕೈಗೊಳ್ಳುತ್ತವೆ. ಅಂತಹದೆ ಸಂಸ್ಥೆಯಾದ ಮಾಯ ಕೇರ್ ಸಂಸ್ಥೆಯು, 72 ಭಾರತದ ನಗರಗಳಲ್ಲಿ ಹಾಗು 5 ಇಂಗ್ಲೆಂಡ್ ದೇಶದ ನಗರಗಳಲ್ಲಿ ಹಿರಿಯರಿಗೆ ಹಾಗು ವಿಕಲ ಚೇತನರಿಗೆ ಅತ್ಯುತ್ತಮ ಸೇವೆಗಳನ್ನು ಸಲ್ಲಿಸುತ್ತಿದೆ.

ಫೆಬ್ರವರಿ 2025ರಲ್ಲಿ ಮಾಯಾಕೇರ್ ಬಿಂದು ಸ್ವಯಂಸೇವಕರ ತಂಡವು ಪುಣೆ ಮ್ಯಾರಥಾನ್‌ನಲ್ಲಿ ಭಾಗವಹಿಸಿದರು. ಅವರು ಆರೋಗ್ಯ ಮತ್ತು ಶಾರೀರಿಕ ತಾಳಮೇಳಕ್ಕೆ ತಮ್ಮ ಬದ್ಧತೆಯನ್ನು ತೋರಿಸಿದರು. ಅನೇಕ ಉತ್ಸಾಹಿ ಸ್ವಯಂಸೇವಕರು ಕಾರ್ಯಕ್ರಮಕ್ಕೆ ಜೀವ ತುಂಬಿದರು. ಸಂಸ್ಥಾಪಕರಾದ ಮಂಜಿರಿ ಗೋಖಲೆ ಜೋಶಿ ಮತ್ತು ಡಾ. ಸುರೇಶ್ ಗೋಖಲೆ ಅವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದು, ಭಾಗವಹಿಸುವವರಲ್ಲಿ ಮತ್ತಷ್ಟು ಪ್ರೋತ್ಸಾಹ ನೀಡಿದರು. ಎಲ್ಲರಿಗೂ ಇದು ಸ್ಮರಣೀಯ ಅನುಭವವಾಯಿತು.

ಮಾಯಾಕೇರ್, ಪುಣೆಯ ಹಿರಿಯ ನಾಗರಿಕರಿಗೆ ವಿದ್ಯುತ್ ಕಾಲ್ನಡಿಗೆ (ಸ್ಮಾರ್ಟ್ ಸ್ಟಿಕ್) ವಿತರಿಸುವ ಮೂಲಕ ಅವರ ಜೀವನದ ಗುಣಮಟ್ಟವನ್ನು ಉನ್ನತಮಟ್ಟದಲ್ಲಿರುವಂತೆ ಮತ್ತು ಸುಧಾರಿತ ತಂತ್ರಜ್ಞಾನವನ್ನು ಬಳಸುವಲ್ಲಿ ಸಹಾಯ ಮಾಡಿತು.

ಮಾಯಾಕೇರ್ ಮಹಿಳಾ ದಿನವನ್ನು ಭಾರಿ ಉತ್ಸಾಹದಿಂದ ಆಚರಿಸಿತು. ಎಲ್ಲಾ ಮಹಿಳಾ ಬಿಂದು ಸದಸ್ಯರನ್ನು ಝೂಂ ತಂತ್ರಜ್ಞಾನದ ಮೂಲಕ ಒಟ್ಟುಗೂಡಿಸಿ, ಪ್ರತಿಭಾ ಪ್ರದರ್ಶನಗಳು, ಆಕರ್ಷಕ ಪ್ರಶ್ನೋತ್ತರ ಅಧಿವೇಶನ ಮತ್ತು ಉತ್ಸಾಹಭರಿತ ವಾತಾವರಣದೊಂದಿಗೆ ಕಾರ್ಯಕ್ರಮ ನಡೆಯಿತು. ಈ ಮೂಲಕ ಮಹಿಳೆಯರ ವಿಶಿಷ್ಟ ಸಾಧನೆಗಳನ್ನು ಗುರುತಿಸಿ, ಆಚರಿಸಲು ಅವಕಾಶ ನೀಡಲಾಯಿತು. ಈ ದಿನವು ಸಂತೋಷ, ಏಕತೆ ಮತ್ತು ಸಬಲೀಕರಣದ ಸಂಕೇತವಾಯಿತು. ಸುಮಾರು 4 ಸಾವಿರಕ್ಕು ಹೆಚ್ಚು ಹಿರಿಯರಿಗೆ ಸ್ವಯಂ ಸೇವಕರ ಸಹಾಯದಿಂದ ಉಚಿತ ದಿನ ನಿತ್ಯದ ಸಣ್ಣ ಚಟುವಟಿಕೆಗಳಿಗೆ ಸಹಾಯ ಹಾಗೂ 2 ಸಾವಿರಕ್ಕು ಹೆಚ್ಚು ವಿಕಲ ಚೇತನರಿಗೆ ಉದ್ಯೋಗವಕಾಶ ಮಾಡಿಕೊಡುತ್ತಿರುವ ಮಾಯ ಕೇರ್ ಸಂಸ್ಥೆಯು ಪ್ರಪಂಚದಾದ್ಯಂತ ವಿಸ್ತರಣೆಗೆ ಪ್ರತಿಯೊಬ್ಬ ನಾಗರಿಕರ ಸಹಾಯ ಬೇಕಾಗಿದೆ. ನಮ್ಮೊಂದಿಗೆ ಕೈ ಜೋಡಿಸುವ ಆಶಯವಿದ್ದರೆ ದಯವಿಟ್ಟು, ಈ ಆರ್ಟಿಕಲ್ ಕೊನೆಯ ಪುಟದಲ್ಲಿರುವ ಹೆಲ್ಪ್ಲೈನ್ ನಂಬರಿಗೆ ಕರೆ ಮಾಡುವ ಮೂಲಕ ಅಥವ ನಮ್ಮ ವೆಬ್ಸೈಟ್ ಗೆ ಬೇಟಿ ನೀಡುವುದರ ಮೂಲಕ ನಮ್ಮನ್ನು ಸಂಪರ್ಕಿಸಿ.

# ಫಲಾನುಭವಿಗಳಿಂದ ಪ್ರತಿಕ್ರಿಯೆ

## ಪಚ್ಚೈಯಮ್ಮಾಳ್ ಟ್ರಸ್ಟ್, ಚೆನ್ನೈ



ಪಚ್ಚೈಯಮ್ಮಾಳ್ ಟ್ರಸ್ಟ್, ಚೆನ್ನೈ ಕೇರ್ ಹೋಮ್ ಭೇಟಿಯನ್ನುಆಯೋಜಿಸಿದ್ದಕ್ಕಾಗಿ ಮಾಯಕೇರ್ ಗೆ ನನ್ನ ಕೃತಜ್ಞತೆಯನ್ನು ವ್ಯಕ್ತಪಡಿಸಲು ಬಯಸುತ್ತೇನೆ.ಈಕಾರ್ಯಕ್ರಮದಲ್ಲಿ ಭಾಗಿಯಾಗಿರುವ ಎಲ್ಲರಿಗೂ ನಿಜವಾಗಿಯೂ ಪ್ರತಿಫಲದಾಯಕ ಅನುಭವವಾಗಿತ್ತು. ಸಿಜಿಐ ಸ್ವಯಂ ಸೇವಕರು ಹಿರಿಯರೊಂದಿಗೆ ಅರ್ಥಪೂರ್ಣ ರೀತಿಯಲ್ಲಿ ತೊಡಗುವುದನ್ನು ನೋಡುವುದು ಅದ್ಭುತವಾಗಿದೆ ಮತ್ತು ಪಚ್ಚೈಯಮ್ಮಾಳ್ ಟ್ರಸ್ಟನಲ್ಲಿ ಕಳೆದ ಸಮಯವು ಎಲ್ಲರಿಗೂ ಸಮೃದ್ಧ ಮತ್ತು ಆನಂದದಾಯಕವಾಗಿದೆ ಎಂದು ನಾವು ವಿಶ್ವಾಸದಿಂದ ಹೇಳಬಹುದು.

## ಪ್ರಾವಿಡೆನ್ಸ್ ವೃದ್ಧಾಶ್ರಮ , ಬೆಂಗಳೂರು



ನಮ್ಮ ವೃದ್ಧಾಶ್ರಮದಲ್ಲಿ ಮಾಯಾಕೇರ್ ಸಂಸ್ಥೆಯ ಮೂಲಕ ಖಾಸಗಿ ಕಂಪನಿಗಳಾದ Oracle, J. P Morgan ಕಂಪನಿಗಳು ಭೇಟಿ ನೀಡಿದ್ದವು. ಈ ಸಲ ಮಾಯಾಕೇರ್ ಸಂಸ್ಥೆಯ ನಿರ್ದೇಶಕರಾದ Dr. ಸುರೇಶ್ ಗೋಖಲೆಯವರು ಭೇಟಿ ನೀಡಿ ನಮ್ಮಲ್ಲಿರುವ ಹಿರಿಯರಿಗೆ ಆರೋಗ್ಯದ ಬಗ್ಗೆ ಉಪಯುಕ್ತ ಮಾಹಿತಿ ನೀಡಿದರು. Pot ಪೇಂಟಿಂಗ್ ಚಟುವಟಿಕೆ ನಡೆಸುವ ಮೂಲಕ ಹಿರಿಯರಿಗೆ ಉತ್ಸಾಹ ತುಂಬಿದರು.ಮಾಯಕೇರ್ ಸ್ವಯಂ ಸೇವಕರಾದ ಪಲ್ಲವಿ, ಸುಮನಾ, ಶೈಲಜ, ವಿಕಾಶ್ ಶರ್ಮ, ಮತ್ತು ಸೆಲ್ವರಾಜ್ ಉಪಸ್ಥಿತರಿದ್ದರು. ಮಾಯಾಕೇರ್ ತಂಡಕ್ಕೆ ಧನ್ಯವಾದಗಳು..

## ವೀಲ್‌ಚೇರ್‌ನಲ್ಲಿ ಸುಲಭ ವ್ಯಾಯಾಮಗಳು

1. ನೇರವಾಗಿ ಕುಳಿತು ಕುತ್ತಿಗೆ ಅನ್ನು ಮುಂದೆ, ಹಿಂದಕ್ಕೆ, ಎಡ-ಬಲಕ್ಕೆ ತಿರುಗಿಸಿ. ಬಳಿಕ ಪೂರ್ಣ ವೃತ್ತಾಕಾರ ಹಾಗೂ ಉಲ್ಟಾ ವೃತ್ತಾಕಾರ ಚಲನೆ ಮಾಡಿ
2. ಮುಷ್ಟಿ ಬಿಗಿಗೊಟ್ಟು ಹೆಬ್ಬೆರಳುಗಳನ್ನು ಮೇಲೆ ಸೇರಿಸಿ, ಭುಜಗಳನ್ನು ವೃತ್ತಾಕಾರ ಹಾಗೂ ಉಲ್ಟಾ ವೃತ್ತಾಕಾರದಲ್ಲಿ ತಿರುಗಿಸಿ. ಬಳಿಕ ಮುಂಭಾಗ ಹಾಗೂ ಅಕ್ಕಪಕ್ಕ ಚಲನೆ ಮಾಡಿ.
3. ಎರಡು ಹೆಬ್ಬೆರಳುಗಳಿಂದ ಕಿವಿಯನ್ನು ಮುಚ್ಚಿಕೊಂಡು ಇನ್ನುಳಿದ ಬೆರಳುಗಳನ್ನು ನಿಮ್ಮ ಕಣ್ಣಿನ ಮೇಲೆ ಇರಿಸಿ ದೀರ್ಘವಾಗಿ ಉಸಿರನ್ನು ತೆಗೆದುಕೊಂಡು ಮಾಕಾರವನ್ನು ಕೂಗುವುದು.
4. ಕೈಗಳನ್ನು ಸೊಂಟದ ಮೇಲೆ ಇಟ್ಟು, ಎಡ-ಬಲ, ಮುಂದೆ-ಹಿಂದಕ್ಕೆ ಬಾಗಿಸಿ, ಬಳಿಕ ಸೊಂಟವನ್ನು ವೃತ್ತಾಕಾರ ಹಾಗೂ ಉಲ್ಟಾ ವೃತ್ತಾಕಾರದಲ್ಲಿ ತಿರುಗಿಸಿ.



# <u>ಬಿಂದು ಸದಸ್ಯನ ಯಶೋಗಾಥೆ</u>



ನಾನು ಅಭಿಜಿತ್ ಮಾಲಿ, ವಿಕಲಚೇತನ. 25ನೇ ವಯಸ್ಸಿನಲ್ಲಿ 72 ನಗರಗಳಲ್ಲಿ ಕಾರ್ಯಾಚರಣೆಯನ್ನೇ ಮೇಲ್ವಿಚಾರಣೆ ಮಾಡುತ್ತಿರುವ ಮಾಯಾಕೇರ್‌ನಲ್ಲಿ ರಾಷ್ಟ್ರೀಯ ಸಂಯೋಜಕನಾಗಿ ಕೆಲಸ ಮಾಡುತ್ತಿದ್ದೇನೆ. ಪಾರ್ಶ್ವವಾಯುವಿನ ನಡುವೆಯೂ ತಂತ್ರಜ್ಞಾನ ಬಳಸಿ ನನ್ನನ್ನು ಹಾಗೂ ಅನೇಕ ವಿಕಲಚೇತನರನ್ನು ಸಬಲೀಕರಿಸುತ್ತಿದ್ದೇನೆ. ಕೈ ಕಾಲು ಚಲಿಸದ ಕಾರಣ, ಮೌತ್ ಸ್ಟೈಲಸ್ ಬಳಸಿ ಮೊಬೈಲ್, ಲ್ಯಾಪ್ಟಾಪ್ ಬಳಸುತ್ತೇನೆ. ಸುಮಾರು 2000 ಹಿರಿಯರಿಗೆ ಸೇವೆ ನೀಡುತ್ತಿದ್ದೇನೆ ಹಾಗೂ 2000ಕ್ಕೂ ಹೆಚ್ಚು ಸ್ವಯಂಸೇವಕರ ತಂಡವನ್ನು ಮುನ್ನಡೆಸುತ್ತಿದ್ದೇನೆ. ಸದಸ್ಯರ ನೇಮಕಾತಿ, ಪ್ರತಿಕ್ರಿಯೆ ಸಂಗ್ರಹ, ಸೇವಾ ವಿನಂತಿ ಹಾಗೂ ವೇಳಾಪಟ್ಟಿಗಳನ್ನು ನಿರ್ವಹಿಸುತ್ತಿದ್ದೇನೆ. ಬ್ರ್ಯಾಂಡಿಂಗ್, ಸಾಮಾಜಿಕ ಮಾಧ್ಯಮ, ವಿನ್ಯಾಸಗಳಲ್ಲಿಯೂ ನಿರಂತರವಾಗಿ ಕೆಲಸ ಮಾಡುತ್ತಿದ್ದೇನೆ.2023ರ ಸೋಶಿಯೋ ಫಿಲ್ಮ್ ಫೆಸ್ಟಿವಲ್ ಪ್ರಶಸ್ತಿ ನನ್ನ ಪ್ರಯತ್ನಗಳಿಗೆ ಪುರಸ್ಕಾರವಾಯಿತು. ಮಾಯಾಕೇರ್ ನನ್ನಲ್ಲಿ ಹೊಸ ಚೈತನ್ಯ ಹುಟ್ಟುಹಾಕಿ, ಆರ್ಥಿಕ ಸ್ವಾತಂತ್ರ್ಯ ನೀಡಿದೆ – ಧನ್ಯವಾದಗಳು.

| | |
|---|---|
| <br>ಮಾಯಕೇರ್ ಸಂಸ್ಥೆಯ ನಿರ್ದೇಶಕರಾದ ಡಾ \|\| ಸುರೇಶ್ ಗೋಖಲೆಯವರು ಬೆಂಗಳೂರಿನ ಕೆ. ರ್. ಪುರಂ ಆಸ್ಪತ್ರೆಯ ಹೆಲ್ಪ್ ಡೆಸ್ಕ್ ಗೆ ಭೇಟಿನೀಡಿ, ವೈದ್ಯರೊಂದಿಗೆ ಸಮಾಲೋಚನೆ ನಡೆಸಿದರು. | <br>ಒರಾಕಲ್ ಸಂಸ್ಥೆ ಮತ್ತು ಮಾಯಕೇರ್ ಸ್ವಯಂ ಸೇವಕರು ಪ್ರಾವಿಡೆನ್ಸ್ ವೃದ್ಧಾಶ್ರಮಕ್ಕೆ ಭೇಟಿ ನೀಡಿ ಹೋಳಿ ಹಬ್ಬವನ್ನು ಆಚರಿಸಿದರು |
| <br>J.Pಮೊರ್ಗನ್ ಕಂಪನಿಯ ಸ್ವಯಂಸೇವಕರು ಪ್ರಾವಿಡೆನ್ಸ್ ವೃದ್ಧಾಶ್ರಮದಲ್ಲಿ ಮಡಕೆ ಚಿತ್ರಕಲೆ (pot painting) ಚಟುವಟಿಕೆ ನಡೆಸಿದರು. | <br>ಸಿ. ಜಿ. ಐ ಕಂಪನಿಯ ಸ್ವಯಂ ಸೇವಕರು ಮತ್ತು ಮಾಯಕೇರ್ ಸಂಧ್ಯಾ ವೃದ್ಧಾಶ್ರಮಕ್ಕೆ ಭೇಟಿ ನೀಡಿ ಸಂಗೀತಾ, ನೃತ್ಯ, ಮೆಹೆಂದಿ ಚಟುವಟಿಕೆ ನಡೆಸಿದರು. |

Year: 1st Issue: 3rd
- 2025

# MAYA CARE FOUNDATION

ಉಚಿತ ಮತ್ತು ಖಾಸಗಿ ಪ್ರಸರಣಕ್ಕೆ ಮಾತ್ರ

## ಮಾಯಾ ಕೇರ್ ರಾಷ್ಟ್ರೀಯ ಸಹಾಯವಾಣಿ: 1800 572 1343

| | |
|---|---|
| ಮಾಯಾ ಕೇರ್ ಭಾರತದ **72** ನಗರಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. | **FOR WHATSAPP** |
| ದಕ್ಷಿಣ ಭಾರತದಲ್ಲಿ ಕೊಯಮತ್ತೂರು, ಚೆನ್ನೈ, ಪಾಂಡಿಚೇರಿ, ಹೈದರಾಬಾದ್, ಬೆಂಗಳೂರು, ಇದನ್ನು ಒಳಗೊಂಡಂತೆ ಭಾರತದ 72 ನಗರಗಳಲ್ಲಿ ಮತ್ತು ಯು. ಕೆ ಯ 4 ನಗರಗಳಲ್ಲಿ ಕಾರ್ಯ ನಿರ್ವಹಿಸುತ್ತಿದೆ | **9552510400/9552510411**<br>**8055995966** |

ಕೆಳಗೆ ನೀಡಿರುವ ಹಿರಿಯ ನಾಗರಿಕರ ಉಚಿತ ಸೇವೆಗಳನ್ನು ವಿಶೇಷ ಚೇತನ ವೃತ್ತಿಪರರಿಂದ ಸಂಪೂರ್ಣವಾಗಿ ನಿರ್ವಹಿಸಲಾಗುತ್ತದೆ

1. ಹಿರಿಯ ನಾಗರಿಕರಿಗೆ ಅವರ ಮನೆಯ ಹತ್ತಿರ ವಾಕಿಂಗ್ ಮಾಡಲು ಸಹಾಯ ಮಾಡುವುದು,ಪತ್ರಿಕೆಗಳು,ಧಾರ್ಮಿಕ ಪುಸ್ತಕ ಗಳನ್ನು ಓದುವುದು. ಆಸ್ಪತ್ರೆಗೆ ಕರೆದುಕೊಂಡು ಹೋಗುವುದು, ವೈದ್ಯರನ್ನು ಭೇಟಿ ಮಾಡಿಸುವುದು, ಬ್ಯಾಂಕ್ ಕೆಲಸಗಳಿಗೆ ಸಹಾಯ ಮಾಡುವುದು, ಹಿರಿಯ ನಾಗರಿಕರನ್ನು ಬಸ್ /ರೈಲ್ವೆ /ವಿಮಾನ ನಿಲ್ದಾಣಗಳಿಗೆ ಕರೆದುಕೊಂಡು ಹೋಗುವುದು, ಆಸ್ಪತ್ರೆಗೆ ದಾಖಲಾದ ಸಮಯದಲ್ಲಿ ICU ವಾರ್ಡ‌ನ ಹೊರಗೆ ರೋಗಿಯೊಂದಿಗೆ ಕುಳಿತುಕೊಳ್ಳುವುದು.ಬ್ಯಾಂಕ್‌ನಲ್ಲಿ ನಗದು/ಚೆಕ್‌ಗಳನ್ನು ಹಿಂಪಡೆಯಲು/ಠೇವಣಿ ಮಾಡಲು ಸಹಾಯ ಮಾಡುವುದು ಸ್ಮಾರ್ಟ್‌ಫೋನ್‌ಗಳ ಬಳಕೆ ಮತ್ತು ತಾಂತ್ರಿಕ ಸಹಾಯ ಮಾಡುವುದು

| | |
|---|---|
| **Website - www.mayacare.org** | **Email : service@mayacare.org** |

Merchant Name : **MAYA CARE FOUNDATION**
Mobile Number : **7721053535**

**Deduction under I-Tax Act is Available**

NAME OF THE A/C - MAYA CARE FOUNDATION

NAME OF THE BANK : ICICI BANK LIMITED (BRANCH : TILAK ROAD,PUNE)
ACCOUNT NO. : 187501000462
IFSC CODE : ICIC0001875

**UPI ID: mayacarefoundation@icici**

**Book-Post**

| **FROM:** | **TO:** |
|---|---|
| **MAYA CARE FOUNDATION**<br>1214 Shukrawar Peth, Africa House, Subhash Nagar, Lane no.04,Pune-411002 | **Shree / Shrimati**<br>__________<br>__________<br>__________ |